**ದಿಃ 20.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಡಿ ಎನ್ ಜಿ ವಕೀಲರಿಂದ**

ನಾನು ಎಸ್ ಎಸ್ ಎಲ್ ಸಿ ಯವರೆಗೆ ಓದಿದ್ದೇನೆ. ಈಗ ನನ್ನ ವಯಸ್ಸು 55. ನಾನು ವಾಟರ್ ಟ್ಯಾಂಕರ್ ಗಳನ್ನು ಬಾಡಿಗೆಗೆ ಕೊಡುತ್ತೇನೆ. ಆ ವಾಟರ್ ಟ್ಯಾಕರ್ ಗಳು ನನ್ನ ಸ್ವಂತ ಲಾರಿಗಳಾಗಿವೆ. ನನಗೆ ಒಬ್ಬನೇ ಮಗ. 1990 ರಲ್ಲಿ ನನ್ನ ಮದುವೆಯಾಗಿರುತ್ತದೆ. ನಾನು ಮೈಸೂರಿನ ಒಂಟಿಕೊಪ್ಪಲಿನ ನಿವಾಸಿ.

2. ನನಗೆ ಸಿ.ಆರ್ .ವಿಶ್ವಪ್ರಕಾಶ್ ರವರ ಪರಿಚಯ ಕಳೆದ 15 ವರ್ಷಗಳಿಂದ ಇರುತ್ತದೆ. ಸಿ.ಬಿ.ಲೀಲಾವತಿಯವರ ಪರಿಚಯ ನಿಮಗೆ ವೈಯಕ್ತಿಕವಾಗಿ ಇರುವುದಿಲ್ಲ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , 'ನಾನು ಅವರ ವಿದ್ಯಾರ್ಥಿ ' ಎನ್ನುತ್ತಾರೆ. ನಾನು ಆಕೆಯ ವಿದ್ಯಾರ್ಥಿ ಅಲ್ಲ ಎನ್ನುವುದು ಸರಿಯಲ್ಲ. ನನ್ನನ್ನು ಆಕೆ ಅವರ ಮನೆಯ ಯಾವುದೇ ಕಾರ್ಯಕ್ರಮಗಳಿಗೂ ಕರೆಯುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಆಕೆಯ ಸಹೋದರ ಸಿ.ಬಿ.ಮೂರ್ತಿಯವರು ಬಸಪ್ಪ ಮೆಮೋರಿಯಲ್ ಆಸ್ಪತ್ರೆಯ ಡೈರೆಕ್ಟರ್ ಆಗಿದ್ದರು ಎನ್ನುವುದು ಸರಿ .

3. 2019 ರಿಂದ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯಕ್ಕೆ ಬರುತ್ತಿದ್ದೇನೆ ಎನ್ನುವುದು ಸರಿ. ಈ ಪ್ರಕರಣದಲ್ಲಿ ಸಿ.ಅರ್.ವಿಶ್ವಪ್ರಕಾಶ್ ರವರು ಏನೆಂದು ಸಾಕ್ಷ್ಯ ನುಡಿದಿದ್ದಾರೆ ಎನ್ನುವುದನ್ನು ನಾನು ಕೇಳಿಸಿಕೊಂಡಿದ್ದೇನೆ ಎನ್ನುವುದು ಸರಿ .

4. ನಾನು ನಿಪಿ 1 ಕ್ಕೆ ಸಹಿ ಹಾಕುವಾಗ ವಿಶ್ವ ಪ್ರಕಾಶ್ ಇದ್ದರು ಎನ್ನುವುದು ಸರಿಯಲ್ಲ. ನಾನು ನಿಪಿ 1 ಕ್ಕೆ ಸಹಿ ಹಾಕುವಾಗ ಇನ್ನೂಬ್ಬ ಸಾಕ್ಷಿ ಹೆಚ್ ಆರ್ ಚಂದ್ರ ಶೇಖರ್ ರಾಜ್ ಅರಸ್ ರವರು ಹಾಜರಿರಲಿಲ್ಲ ಎನ್ನುವುದು ಸರಿಯಲ್ಲ. ನಿಪಿ 1 ರ ಮೇಲೆ ಸಿ.ಬಿ. ಲೀಲಾವತಿಯವರು ಸಹಿ ಹಾಕಿರುವುದಿಲ್ಲ

ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ, ನನ್ನ ಮುಂದೆಯೇ ಆಕೆ ಸಹಿ ಹಾಕಿದರು ಎಂದು. ನಿಪಿ 1 ನ್ನು ವಿಶ್ವ ಪ್ರಕಾಶ್, ಆರ್ ಯೋಗಿನಿ, ನಾನು, ಹೆಚ್ ಆರ್ ಚಂದ್ರ ಶೇಖರ್ ರಾಜ್ ಅರಸ್ ಮತ್ತು ನೋಟರಿ ಸೇರಿ ಸೃಷ್ಟಿಸಿರುತ್ತೇವೆ ಎನ್ನುವುದು ಸರಿಯಲ್ಲ.

5. ನಿಪಿ 1 ರಲ್ಲಿ, ನಿಪಿ 1 ಬಿ ಎಂದು ಗುರುತುಪಡಿಸಲಾಗಿರುವ ಸಹಿ ಸಿ.ಬಿ.ಲೀಲಾವತಿಯವರ ಸಹಿ ಆಗಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 1 ರ ಪ್ರತಿ ಪುಟಗಳಲ್ಲಿ ಇರುವ ಸಹಿಗಳು ಸಿ.ಬಿ.ಲೀಲಾವತಿಯವರ ಸಹಿಗಳು ಆಗಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 1 ದಾಖಲಾತಿಯನ್ನು ನಾನು ವಿಶ್ವ ಪ್ರಕಾಶ್ ರವರಿಗೆ ಕೊಟ್ಟಿರುವುದಿಲ್ಲ.

6. ಪಿ ಅಂಡ್ ಎಸ್ ನಂ. 29/2019 ನ್ನು ನ್ಯಾಯಾಲಯದಲ್ಲಿ ಹೂಡುವ ಮೊದಲು , ನಿಪಿ 1 ನ್ನು ಸೃಷ್ಟಿಸಿರುತ್ತೇವೆ ಎನ್ನುವುದು ಸರಿಯಲ್ಲ. ಈ ನ್ಯಾಯಾಲಯವನ್ನು ಹೊರತು ಪಡಿಸಿ ನಿಪಿ 1 ಕ್ಕೆ ಸಂಬಂಧಪಟ್ಟಂತೆ ಬೇರೆ ಯಾವ ನ್ಯಾಯಾಲಯದಲ್ಲೂ ನಾನು ಸಾಕ್ಷ್ಯ ನುಡಿದಿರುವುದಿಲ್ಲ ಎನ್ನುವುದು ಸರಿ. ನಿಪಿ 1 ಕ್ಕೆ ನೀವು ಸಹಿ ಮಾಡುವಾಗ ಅದರಲ್ಲಿ ನಮೂದಾಗಿರುವ ನೋಟರಿಯವರು ತಮ್ಮ ಸೀಲುಗಳನ್ನು ಮತ್ತು ರಿಜಿಸ್ಟರ್ ನ್ನು ತಂದಿದ್ದರು ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ನಾವುಗಳು ನೋಟರಿಯವರ ಕಛೇರಿಗೆ ಹೋಗಿದ್ದೆವು ಎನ್ನುತ್ತಾರೆ. ನೋಟರಿಯವರು ಸೀಲು ಹಾಕಿದ ನಂತರ ತಮ್ಮ ರಿಜಿಸ್ಟರ್ ನಲ್ಲಿ ನಮೂದು ಮಾಡಿಕೊಂಡಿರುತ್ತಾರೆ. ನೋಟರಿಯವರು ತಮ್ಮ ರಿಜಿಸ್ಟರ್ ನಲ್ಲಿ ನಮೂದಿಸಿಕೊಂಡಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 1 ರ ಮೇಲಿರುವ ಸೀಲನ್ನು ನಾವೇ ಹಾಕಿಕೊಂಡಿರುತ್ತೇವೆ ಎನ್ನುವುದು ಸರಿಯಲ್ಲ. ನಿಪಿ 1 ಕ್ಕೆ ನಾನು ಸಹಿ ಹಾಕುವಾಗ ಅದನ್ನು ಓದಿ ನೋಡಿರುವುದಿಲ್ಲ. ಸಿ.ಬಿ.ಲೀಲಾವತಿಯವರು ನನ್ನನ್ನು ಯಾವುದೇ ನೋಟರಿಯವರ ಕಛೇರಿಗೆ ಕರೆದಿರಲಿಲ್ಲ ಎನ್ನುವುದು ಸರಿಯಲ್ಲ. ಸಿ.ಬಿ.ಲೀಲಾವತಿಯವರು ನಿಪಿ 1 ಕ್ಕೆ ಸಹಿ ಹಾಕಲು ನನಗೆ ಹೇಳಿರಲಿಲ್ಲ ಎನ್ನುವುದು ಸರಿಯಲ್ಲ. ಸಿ.ಬಿ.ಲೀಲಾವತಿಯವರ ಮೊಬೈಲ್ ನಂಬರ್ ನ್ನು ನನಗೆ

ಹೇಳಲು ಆಗುವುದಿಲ್ಲ. 2013 ರಲ್ಲಿ ನೀವು ಯಾವ ಮೊಬೈಲನ್ನು ಉಪಯೋಗಿಸುತ್ತಿದ್ದಿರಿ ಎಂದು ಮಾಡಿದ ಸಲಹೆಗೆ ಸಾಕ್ಷಿ ಆಗ ನಾನು ಮೊಬೈಲನ್ನು ಉಪಯೋಗಿಸುತ್ತಿರಲ್ಲಿ ಎನ್ನುತ್ತಾರೆ. ಈಗ ನನ್ನಲ್ಲಿ ಮೊಬೈಲ್ ಇರುತ್ತದೆ. ನನಗೆ ಸಿ.ಬಿ.ಲೀಲಾವತಿಯವರ ಪರಿಚಯ ಇರಲಿಲ್ಲ ಎನ್ನುವುದು ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು

**.03.2021 ರಂದು ಆದ ಆದೇಶದ ಮೇರೆಗೆ**

**ಸಾಕ್ಷಿಯನ್ನು ದಿಃ 16.03.2021 ಪುನಃ ಕರೆಯಿಸಿ**

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ- ಅರ್ಜಿ ದಾರರ ಪರ ಶ್ರೀ ಎಂ. ಪಿ. ಪಿ. ವಕೀಲರಿಂದ**

ನನ್ನ ವೇತನ ಪ್ರಮಾಣಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,
ಮತ್ತು ಎಮ್.ಎ.ಸಿ.ಟಿ.ಮೈಸೂರು

**ಸಾಕ್ಷಿಯನ್ನು ದಿಃ 17.03.2021 ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಜೆ.ಎಸ್.ಕೆ ವಕೀಲರಿಂದ.**

ನನಗೆ ಬ್ಯಾಂಕ್ ಖಾತೆ ಇರುತ್ತದೆ. ನನ್ನ ಸಂಬಳವು ನನ್ನ ಬ್ಯಾಂಕ್ ಆಫ್ ಬರೋಡದಲ್ಲಿರುವ ಬ್ಯಾಂಕ್ ಖಾತೆಗೆ ಜಮಾವಾಗುತ್ತದೆ. ನಿಪಿ-8 ನ್ನು ಮೊದಲೇ ಹಾಜರು ಪಡಿಸಲು ತೊಂದರೆ ಇರಲಿಲ್ಲ. ನಾನು ಒಳರೋಗಿಯಾಗಿ ಒಂದೂವರೆ ದಿನ ಮಾತ್ರ ಇದ್ದೆನು. ನಿಪಿ-8 ನ್ನು ಹೆಚ್ಚಿನ ಪರಿಹಾರ ಪಡೆಯಲು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,
ಮತ್ತು ಎಮ್.ಎ.ಸಿ.ಟಿ.ಮೈಸೂರು